ಈ ಲೇಖನದ ವಿಷಯಾನುಕ್ರಮಣಿಕೆ


**ಪಕ್ಷಶ್ರಾದ್ಧಕ್ಕೆ ಶ್ರೇಷ್ಠ ಮತ್ತು ನಿಷಿದ್ಧ ದಿವಸಗಳು 2**

**ಮಹಾಲಯಶ್ರಾದ್ಧ ಮಾಡದೇ ಇದ್ದರೆ ದೋಷ 2**

**ಇಡಿಯ ಪಕ್ಷದಲ್ಲಿ ಶ್ರಾದ್ಧ 4**

ಏಕಾದಶೀ, ಘಾತಚತುರ್ದಶಿ ಪಕ್ಷ ಮಾಡಬಾರದು 6

ಶ್ರಾದ್ಧ ಮಾಡಲಿಕ್ಕಾಗದವರು ತರ್ಪಣ ನೀಡಲೇಬೇಕು 6

**ಮಹಾಲಯಕ್ಕೆ ನಿಷಿದ್ಧವಾದ ದಿವಸಗಳು 7**

ಪ್ರತಿಪದಾ, ಷಷ್ಠೀ, ಏಕಾದಶೀ, ಚತುರ್ದಶಿಗಳು 8

ಶುಕ್ರವಾರ ಪಕ್ಷ ಮಾಡಬಾರದು 8

ಮೂರೂ ಜನ್ಮನಕ್ಷತ್ರಗಳಲ್ಲಿ ಪಕ್ಷ ಮಾಡಬಾರದು 9

ರೋಹಿಣೀ, ರೇವತೀ, ಮಘಾಗಳಲ್ಲಿ ಮಾಡಬಾರದು 10

**ನಿಷೇಧಕ್ಕೆ ಪ್ರತಿನಿಷೇಧ 12**

ನಿತ್ಯಶ್ರಾದ್ಧ ಮಾಡುವವರಿಗೆ ಈ ನಿಯಮವಿಲ್ಲ 12

ಮರಣತಿಥಿಯಂದು ಶ್ರಾದ್ಧ ಮಾಡುವವರಿಗೆ ಈ ನಿಯಮವಿಲ್ಲ 13

ಅಮಾವಾಸ್ಯಾ, ವ್ಯತೀಪಾತ ಭರಣೀ, ದ್ವಾದಶೀ, ಅಷ್ಟಮೀಗಳಿಗೆ ಈ ನಿಯಮವಿಲ್ಲ 14

**ಮಹಾಲಯಕ್ಕೆ ಶ್ರೇಷ್ಠವಾದ ದಿವಸಗಳು 16**

ತಂದೆಯವರ ಮರಣತಿಥಿ ಪಕ್ಷಕ್ಕೆ ಸರ್ವಶ್ರೇಷ್ಠ 16

ಅಮಾವಾಸ್ಯಾ 20

ಮಹಾಭರಣೀ 20

ಮಧ್ಯಾಷ್ಟಮೀ 21

## ಪಕ್ಷಶ್ರಾದ್ಧಕ್ಕೆ ಶ್ರೇಷ್ಠ ಮತ್ತು ನಿಷಿದ್ಧ ದಿವಸಗಳು

ಮಹಾಲಯದಲ್ಲಿ ಯಾವಾಗ ಶ್ರಾದ್ಧ ಮಾಡಬಾರದು? ಯಾವಾಗ ಮಾಡಬೇಕು ಎನ್ನುವದನ್ನು ನಮ್ಮ ಪ್ರಾಚೀನ ಋಷಿಮುನಿಗಳು ಸ್ಪಷ್ಟವಾಗಿ ತಿಳಿಸಿ ಹೇಳಿದ್ದಾರೆ.

### ಮಹಾಲಯಶ್ರಾದ್ಧ ಮಾಡದೇ ಇದ್ದರೆ ದೋಷ

ಪಿತೃಪಕ್ಷದಲ್ಲಿ ಶ್ರಾದ್ಧವನ್ನು ಮಾಡಲೇಬೇಕು. ಆಗ ಶ್ರಾದ್ಧವನ್ನು ಮಾಡದಿದ್ದಲ್ಲಿ ಚಂಡಾಲಜನ್ಮ ಬರುತ್ತದೆ ಎಂದು ನಾಗರಖಂಡದಲ್ಲಿ ವಚನವಿದೆ —

**ಆಷಾಢ್ಯಾಃ ಪಂಚಮೇ ಪಕ್ಷೇ**
**ಯಃ ಶ್ರಾದ್ಧಂ ನ ಕರಿಷ್ಯತಿ ।**
**ಶಾಕೇನಾಪಿ ದರಿದ್ರೋಽಪಿ**
**ಸೋಽಂತ್ಯಜತ್ವಮುಪೇಷ್ಯತಿ ।**

ಅತ್ಯಂತ ದರಿದ್ರನಾಗಿದ್ದರೂ, ಕನಿಷ್ಠಪಕ್ಷ ತರಕಾರಿಗಳನ್ನು ದಾನ ನೀಡಿಯಾದರೂ ಮಹಾಲಯಶ್ರಾದ್ಧ ಮಾಡಬೇಕು. ಇಲ್ಲದಿದ್ದರೆ ಅವನು ಚಂಡಾಲನಾಗಿ ಹುಟ್ಟುತ್ತಾನೆ.

ಮಹಾಲಯದಲ್ಲಿ ಶ್ರಾದ್ಧ ಮಾಡುವದರಿಂದ ಶ್ರೇಷ್ಠ ಸೌಭಾಗ್ಯವನ್ನು ಪಿತೃಗಳು ಮತ್ತು ಪಿತೃದೇವತೆಗಳು ಅನುಗ್ರಹಿಸುತ್ತಾರೆ, ಎಂದು ಕಾರ್ಷ್ಣಾಜಿನಿ ಋಷಿಗಳು ತಿಳಿಸುತ್ತಾರೆ —

**ಪುತ್ರಾನಾಯುಸ್ತಥಾರೋಗ್ಯಂ**
**ಐಶ್ವರ್ಯಮತುಲಂ ತಥಾ ।**
**ಪ್ರಾಪ್ನೋತಿ ಪಂಚಮೇ ದತ್ವಾ**
**ವಿಶೇಷೇಣೈವ ಕಾರಯೇತ್ ।**

ಸತ್ಸಂತಾನ, ಉತ್ತಮ ಆರೋಗ್ಯ, ಅತುಲವಾದ ಐಶ್ವರ್ಯಗಳನ್ನು ಪಿತೃಪಕ್ಷದಲ್ಲಿ ಶ್ರಾದ್ಧ ಮಾಡುವದರಿಂದ ಮನುಷ್ಯ ಪಡೆಯುತ್ತಾನೆ. ತಾನು ಮಾಡುವದಷ್ಟೇ ಅಲ್ಲ, ಮತ್ತೊಬ್ಬರಿಗೂ ಮಹಾಲಯದ ಮಾಹಾತ್ಮ್ಯವನ್ನು ತಿಳಿಸಿ

ಅವರಿಂದ ಶ್ರಾದ್ಧ ಮಾಡಿಸುವದರಿಂದ ಈ ಫಲಗಳನ್ನು ಪಡೆಯುತ್ತಾನೆ.

## ಇಡಿಯ ಪಕ್ಷದಲ್ಲಿ ಶ್ರಾದ್ಧ

ಭಾದ್ರಪದ ಕೃಷ್ಣಪಕ್ಷದ ಪ್ರತಿಪದೆಯಿಂದ, ಭಾದ್ರಪದ ಅಮಾವಾಸ್ಯೆಯವರೆಗಿನ ಕಾಲವನ್ನು ಪಿತೃಪಕ್ಷ ಎನ್ನುತ್ತಾರೆ.

ಈ ಸಂದರ್ಭದಲ್ಲಿ ನಾವು ಸಮಸ್ತ ಪಿತೃಗಳಿಗೂ ಶ್ರಾದ್ಧವನ್ನು ಮಾಡಬೇಕು. ಏಕಾದಶೀದಿವಸ ಹೊರತು ಪಡಿಸಿ ಉಳಿದ ಹದಿನಾಲ್ಕು ದಿವಸಗಳೂ ಶ್ರಾದ್ಧ ಮಾಡಬೇಕು.

ಈ ಮಾತನ್ನು ಕಾತ್ಯಾಯನರು ಹೇಳಿದ್ದಾರೆ —

**ನಭಸ್ಯಸ್ಯಾಪರೇ ಪಕ್ಷೇ**
**ಶ್ರಾದ್ಧಂ ಕುರ್ಯಾದ್ ದಿನೇದಿನೇ।**

ಬ್ರಹ್ಮಪುರಾಣದಲ್ಲಿಯೂ ಈ ಮಾತಿದೆ —

**ಆಶ್ವಯುಕ್ಕೃಷ್ಣಪಕ್ಷೇ ತು**

## ಶ್ರಾದ್ಧಂ ಕುರ್ಯಾದ್ ದಿನೇದಿನೇ । [1]

ಕಾತ್ಯಾಯನರು ಭಾದ್ರಪದ ಕೃಷ್ಣದಲ್ಲಿ ಮಹಾಲಯ ಎನ್ನುತ್ತಾರೆ, ಬ್ರಹ್ಮಪುರಾಣ ಆಶ್ವೀನ ಕೃಷ್ಣದಲ್ಲಿ ಎನ್ನುತ್ತದೆ.

ವಸ್ತುಸ್ಥಿತಿಯಲ್ಲಿ ಗೊಂದಲವಿಲ್ಲ. ಕಾರಣ, ಕೃಷ್ಣಪಕ್ಷಕ್ಕೆ ಸಂಬಂಧಿಸಿದ ಯಾವುದೇ ಆಚರಣೆಯನ್ನೂ ಶಾಸ್ತ್ರಗಳು ಎರಡು ಮಾಸಗಳಿಗೆ ಸಂಬಂಧಿಸಿದಂತೇ ಉಲ್ಲೇಖಿಸುತ್ತವೆ.

ಯಾವ ಕೃಷ್ಣಪಕ್ಷಕ್ಕೆ ಆಶ್ವೀನ ಕೃಷ್ಣಪಕ್ಷ ಎಂದೂ ಹೆಸರಿದೆಯೋ, ಭಾದ್ರಪದಕೃಷ್ಣಪಕ್ಷ ಎಂದೂ ಹೆಸರಿದೆಯೋ ಆ ಕೃಷ್ಣಪಕ್ಷದಲ್ಲಿ ಶ್ರಾದ್ಧವನ್ನು ಮಾಡಬೇಕು ಎಂದರ್ಥ.

ಶುಕ್ಲಾದಿಯಾದ ಭಾದ್ರಪದಕೃಷ್ಣಪಕ್ಷ, ಕೃಷ್ಣಾದಿಯಾದ ಲೆಕ್ಕದಲ್ಲಿ ಆಶ್ವೀನ ಕೃಷ್ಣಪಕ್ಷವೂ

---

[1] ಕೃಷ್ಣಾಷ್ಟಮಿಯ ಕುರಿತ ಉಪನ್ಯಾಸದಲ್ಲಿ ಸಂನ್ಯಾಸಪದ್ಧತಿಯ "ಸಿಂಹಮಾಸೇ ತು ರೋಹಿಣ್ಯಾ ಯುತಾಮ್" ಎನ್ನುವ ವಾಕ್ಯದ ಚರ್ಚೆಯನ್ನು ಮಾಡಬೇಕಾದರೆ ಮಹಾಲಯದ ಕುರಿತ ಚರ್ಚೆಯೂ ಇದೆ. VNU146. ಕೇಳಿ.

ಆಗುತ್ತದೆಯಾದ್ದರಿಂದ ಶುಕ್ಲಾದಿಯಾದ ಭಾದ್ರಪದಕೃಷ್ಣದಲ್ಲಿಯೇ ಮಹಾಲಯ ಎನ್ನುವದು ನಿರ್ಣೀತವಾಯಿತು[2].

## ಏಕಾದಶೀ, ಘಾತಚತುರ್ದಶಿ ಪಕ್ಷ ಮಾಡಬಾರದು

ಏಕಾದಶೀವ್ರತ ಸಕಲನಿಯಮಗಳಿಗಿಂತಲೂ ಮಹತ್ತ್ವದ್ದಾದ್ದರಿಂದ ಏಕಾದಶೀ ದಿವಸ ಶ್ರಾದ್ಧವನ್ನು ಮಾಡುವಂತಿಲ್ಲ. ಘಾತಚತುರ್ದಶಿಯಂದು ದುರ್ಮರಣ ಹೊಂದಿದವರಿಗೆ ಮಾತ್ರ ಶ್ರಾದ್ಧ. ಈ ಎರಡು ದಿವಸ ಬಿಟ್ಟು ಎಲ್ಲ ದಿವಸಗಳಲ್ಲಿಯೂ ಶ್ರಾದ್ಧ ಮಾಡಬೇಕು, ಇಡಿಯ ಪಕ್ಷದಲ್ಲಿ ಶ್ರಾದ್ಧ ಮಾಡುವ ಶ್ರದ್ಧಾಳುಗಳು.

## ಶ್ರಾದ್ಧ ಮಾಡಲಿಕ್ಕಾಗದವರು ತರ್ಪಣ ನೀಡಲೇಬೇಕು

ಆದರೆ, ಈಗ ಪ್ರತೀದಿವಸ ಮಾಡುವವರು ಬಹಳ ಕಡಿಮೆ. ಮಹಾಲಯದಲ್ಲಿ ಒಂದು ದಿವಸ ಮಾತ್ರ ಪಕ್ಷವನ್ನು ಮಾಡಿಬಿಡುತ್ತಾರೆ.  ಅಂಥಹವರೂ ಸಹ

---

[2] ಶುಕ್ಲಾದಿ ಕೃಷ್ಣಾದಿಗಳ ಕುರಿತ ವಿವರವಾದ ಚಿತ್ರಣವನ್ನು ಬನ್ನಂಜೆ ವಿಮರ್ಶದ ಪುಸ್ತಕದಲ್ಲಿ ಮತ್ತು ಉಪನ್ಯಾಸದಲ್ಲಿ ನೀಡಿದ್ದೇನೆ.  VNU144

ಪ್ರತೀದಿವಸ ತರ್ಪಣವನ್ನು ಮಾತ್ರ ನೀಡಲೇ ಬೇಕು, ಏಕಾದಶಿಯನ್ನು ಹೊರತುಪಡಿಸಿ.

## ಮಹಾಲಯಕ್ಕೆ ನಿಷಿದ್ಧವಾದ ದಿವಸಗಳು

ಒಂದೇ ಬಾರಿ ಶ್ರಾದ್ಧ ಮಾಡುವವರು ಯಾವ ದಿವಸಗಳಲ್ಲಿ ಶ್ರಾದ್ಧ ಮಾಡಬಾರದು ಎನ್ನುವದನ್ನು ವಸಿಷ್ಠರು ತಿಳಿಸಿದ್ದಾರೆ —

**ನಂದಾಯಾಂ ಭಾರ್ಗವದಿನೇ**
**ಚತುರ್ದಶ್ಯಾಂ ತ್ರಿಜನ್ಮಸು ।**
**ಏಷು ಶ್ರಾದ್ಧಂ ನ ಕುರ್ವೀತ**
**ಗೃಹೀ ಪುತ್ರಧನಕ್ಷಯಾತ್ ॥**

ನಂದಾತಿಥಿಗಳಲ್ಲಿ, ಶುಕ್ರವಾರದಲ್ಲಿ, ಚತುರ್ದಶಿಯಂದು ಮತ್ತು ಮೂರೂ ಜನ್ಮತಾರೆಗಳಲ್ಲಿ ಪಕ್ಷ ಮಾಡಬಾರದು. ಮಾಡಿದರೆ ಮಕ್ಕಳು ಹಾಗೂ ಹಣವನ್ನು ಕಳೆದುಕೊಳ್ಳುತ್ತೇವೆ.

ಈ ತಿಥಿ, ವಾರ, ನಕ್ಷತ್ರಗಳ ನಿಯಮ ಇಡಿಯ ಪಕ್ಷದಲ್ಲಿ ಶ್ರಾದ್ಧವನ್ನು ಒಂದೇ ಬಾರಿ ಮಾಡುವವರಿಗೆ ಮಾತ್ರ. ನಿತ್ಯ ಮಾಡುವವರಿಗೂ ಅನ್ವಯಿಸುವದಿಲ್ಲ

ಹಾಗೂ ತಂದೆಯ ಮರಣತಿಥಿಯಂದೇ ಶ್ರಾದ್ಧ ಮಾಡುವವರಿಗೂ ಅನ್ವಯಿಸುವದಿಲ್ಲ ಎನ್ನುವದನ್ನು ಮುಂದೆ ತಿಳಿಯುತ್ತೇವೆ.

## ಪ್ರತಿಪದಾ, ಷಷ್ಠೀ, ಏಕಾದಶೀ, ಚತುರ್ದಶಿಗಳು

1. **ಪ್ರತಿಪದಾ, ಷಷ್ಠೀ ಮತ್ತು ಏಕಾದಶಿಗಳಿಗೆ ನಂದಾತಿಥಿ ಎಂದು ಹೆಸರು. ಈ ತಿಥಿಗಳಂದು ಮಹಾಲಯಶ್ರಾದ್ಧ ಮಾಡಬಾರದು.**

2. **ಘಾತಚತುರ್ದಶಿಯಂದು ಮಹಾಲಯಶ್ರಾದ್ಧ ಮಾಡಬಾರದು. ಅಘಘಾತ - ಕೊಲೆ - ಆತ್ಮಹತ್ಯೆಗಳಿಂದ ಸತ್ತವರಿಗೆ ಮಾತ್ರ ಘಾತಚತುರ್ದಶಿಯಂದು ಶ್ರಾದ್ಧ.**

## ಶುಕ್ರವಾರ ಪಕ್ಷ ಮಾಡಬಾರದು

3. **ಶುಕ್ರವಾರದಂದು ಮಹಾಲಯಶ್ರಾದ್ಧ ಮಾಡಬಾರದು.**

## ಮೂರೂ ಜನ್ಮನಕ್ಷತ್ರಗಳಲ್ಲಿ ಪಕ್ಷ ಮಾಡಬಾರದು

ಕರ್ತೃವಿನ ಜನ್ಮತಾರೆಯಿರುವ ದಿವಸ ಶ್ರಾದ್ಧ ಮಾಡಬಾರದು[3].

ಇಪ್ಪತ್ತೇಳು ನಕ್ಷತ್ರಗಳಲ್ಲಿ ಮೂರು ನಕ್ಷತ್ರಗಳು ಜನ್ಮನಕ್ಷತ್ರಗಳಾಗಿರುತ್ತವೆ.

ಹುಟ್ಟಿದ ನಕ್ಷತ್ರವನ್ನು ಒಂದು ಎಂದು ಲೆಕ್ಕ ಹಾಕಿ, ಹತ್ತನೆಯ ನಕ್ಷತ್ರ ಮತ್ತು ಹತ್ತೊಂಬತ್ತನೆಯ ನಕ್ಷತ್ರಗಳು ಜನ್ಮತಾರೆಯಾಗುತ್ತವೆ. ಉದಾಹರಣೆಗೆ ಭರಣಿಯಲ್ಲಿ ಹುಟ್ಟಿದವರಿಗೆ ಭರಣೀ, ಪುಬ್ಬಾ, ಪೂರ್ವಾಷಾಢಾ ನಕ್ಷತ್ರಗಳು ಜನ್ಮತಾರೆ.

ಈ ಜನ್ಮತಾರೆಗಳಿರುವ ದಿವಸ ಶ್ರಾದ್ಧ ಮಾಡಬಾರದು.

ಹೀಗಾಗಿ ಒಂದೇ ಬಾರಿ ಶ್ರಾದ್ಧ ಮಾಡುವವರು ಈ ನಿಯಮವನ್ನು ಅವಶ್ಯವಾಗಿ ಅನುಸರಿಸಬೇಕು.

---

[3] 3 ಕರ್ತೃಗಳು ಅನೇಕರಿದ್ದಾಗ ಹಿರಿಯಣ್ಣನ (ಅಥವಾ ಯಾರು ಪಿಂಡ ಪ್ರದಾನ ಮಾಡುತ್ತಾರೆಯೋ ಅವರ) ಜನ್ಮತಾರೆಗಳಂದು ಮಾಡಬಾರದು.

## ರೋಹಿಣೀ, ರೇವತೀ, ಮಘಾಗಳಲ್ಲಿ ಮಾಡಬಾರದು

### ೪. ರೋಹಿಣೀ, ರೇವತೀ ಮತ್ತು ಮಘಾ ಈ ನಕ್ಷತ್ರಗಳು ಇರುವ ದಿವಸ ಮಹಾಲಯಶ್ರಾದ್ಧವನ್ನು ಮಾಡಬಾರದು.

ತಂದೆಯವರ ಮರಣ ತಿಥಿ ಇರುವ ದಿವಸ ರೋಹಿಣೀ, ರೇವತೀ ಮಘಾ ನಕ್ಷತ್ರಗಳು ಇದ್ದರೂ ಶ್ರಾದ್ಧ ಮಾಡಬಹುದು. ನಿತ್ಯಶ್ರಾದ್ಧ ಮಾಡುವವರೂ ಸಹ ಈ ದಿವಸಗಳಲ್ಲಿ ಮಾಡಬಹುದು.

ಮೇಲೆ ಹೇಳಿದ ದಿವಸಗಳಲ್ಲಿ ಮಹಾಲಯಶ್ರಾದ್ಧ ಮಾಡಿದರೆ ಮಕ್ಕಳಿಗೆ ತೊಂದರೆಯುಂಟಾಗುತ್ತದೆ ಮತ್ತು ಸಂಪತ್ತು ನಾಶವಾಗುತ್ತದೆ ಎಂದು ವಸಿಷ್ಠರು ಮತ್ತು ವೃದ್ಧಗರ್ಗರು ಇಬ್ಬರೂ ತಿಳಿಸಿದ್ದಾರೆ.

**ಪ್ರಾಜಾಪತ್ಯೇ ಚ ಪೌಷ್ಣೇ ಚ**
**ಪಿತ್ರ್ಯರ್ಕ್ಷೇ ಭಾರ್ಗವೇ ತಥಾ ।**
**ಯಸ್ತು ಶ್ರಾದ್ಧಂ ಪ್ರಕುರ್ವೀತ**
**ತಸ್ಯ ಪುತ್ರೋ ವಿನಶ್ಯತಿ ॥**

ರೋಹಿಣೀ ನಕ್ಷತ್ರಕ್ಕೆ ಪ್ರಜಾಪತಿ ನಿಯಾಮಕದೇವತೆಯಾದ್ದರಿಂದ ರೋಹಿಣಿಯನ್ನು ಪ್ರಾಜಾಪತ್ಯ ಎನ್ನುತ್ತಾರೆ.

ರೇವತೀ ನಕ್ಷತ್ರಕ್ಕೆ ಪೂಷಾ ಎನ್ನುವ ಆದಿತ್ಯ ನಿಯಾಮಕದೇವತೆಯಾದ್ದರಿ ಅದನ್ನು ಪೌಷ್ಣ ಎನ್ನುತ್ತಾರೆ.

ಮಘಾನಕ್ಷತ್ರಕ್ಕೆ ಪಿತೃದೇವತೆಗಳು ನಿಯಾಮಕರಾದ್ದರಿಂದ ಆ ನಕ್ಷತ್ರವನ್ನು ಪೈತ್ರಕ, ಪಿತ್ರರ್ಕ್ಷ ಎಂದು ಕರೆಯುತ್ತಾರೆ.

**ರೋಹೀಣೀ, ರೇವತೀ, ಮಘಾ ನಕ್ಷತ್ರಗಳಲ್ಲಿ, ಹಾಗೂ ಶುಕ್ರವಾರ ಯಾರು ಶ್ರಾದ್ಧ ಮಾಡುತ್ತಾರೆಯೋ ಅವರ ಸಂತಾನನಷ್ಟವಾಗುತ್ತದೆ ಎಂದು ಶ್ಲೋಕದ ಅರ್ಥ.**

**ಸಂತಾನವೇ ಇಲ್ಲದವರು ಮಾತ್ರ ಮಘಾನಕ್ಷತ್ರದಲ್ಲಿ  ಶ್ರಾದ್ಧ ಮಾಡಬೇಕು. ಮಕ್ಕಳಿರುವವರು, ಮಕ್ಕಳಾಗುವ ಸಾಧ್ಯತೆ ಇರುವವರು ಶ್ರಾದ್ಧ ಮಾಡಬಾರದು. ಪ್ರತ್ಯೇಕ ಲೇಖನದಲ್ಲಿ ಇದನ್ನು ವಿವರಿಸುತ್ತೇನೆ.**

## ನಿಷೇಧಕ್ಕೆ ಪ್ರತಿನಿಷೇಧ

ಹೀಗೆ, ಪ್ರತಿಪದಾ ಷಷ್ಠೀಗಳಲ್ಲಿ ಶುಕ್ರವಾರ, ಮತ್ತು ಜನ್ಮನಕ್ಷತ್ರಗಳಲ್ಲಿ ಮಹಾಲಯಶ್ರಾದ್ಧ ಮಾಡಬಾರದು ಎನ್ನುವ ನಿಷೇಧ ಎಲ್ಲ ಸಂದರ್ಭಗಳಲ್ಲಿಯೂ ಅನ್ವಯವಾಗುವದಿಲ್ಲ ಎನ್ನುವದನ್ನೂ ಶಾಸ್ತ್ರ ತಿಳಿಸುತ್ತದೆ.

## ನಿತ್ಯಶ್ರಾದ್ಧ ಮಾಡುವವರಿಗೆ ಈ ನಿಯಮವಿಲ್ಲ

ಇಡಿಯ ಮಹಾಲಯದಲ್ಲಿ ಪ್ರತೀದೀವಸವೂ ಶ್ರಾದ್ಧ ಮಾಡುವವರು ಮೇಲಿನ ದಿವಸಗಳಲ್ಲಿಯೂ — ಏಕಾದಶಿಯನ್ನು ಹೊರತು ಪಡಿಸಿ — ಶ್ರಾದ್ಧ ಮಾಡಬಹುದು. ಅವರಿಗೆ ಮೇಲಿನ ನಿಯಮಗಳು ಅನ್ವಯಿಸುವದಿಲ್ಲ ಎಂದು ಶ್ರೀ ವೇದವ್ಯಾಸದೇವರ ಶಿಷ್ಯರಾದ ಕಾರ್ಷ್ಣಾಜಿನಿಋಷಿಗಳು ಹೇಳಿದ್ದಾರೆ.

**ನಭಸ್ಯಸ್ಯಾಪರೇ ಪಕ್ಷೇ**
**ಶ್ರಾದ್ಧಂ ಕುರ್ಯಾದ್ ದಿನೇದಿನೇ ।**
**ನೈವ ನಂದ್ಯಾದಿ ವರ್ಜ್ಯಂ**
**ಸ್ಯಾನ್ನೇ ವ ವರ್ಜ್ಯಾ ಚತುರ್ದಶೀ ॥**

ಭಾದ್ರಪದಕೃಷ್ಣದಲ್ಲಿ ಪ್ರತೀದಿವಸವೂ ಶ್ರಾದ್ಧ ಮಾಡಬೇಕು. ನಿತ್ಯಶ್ರಾದ್ಧ ಮಾಡುವವರಿಗೆ ನಂದಾತಿಥಿ, ಶುಕ್ರವಾರ, ಮತ್ತು ನಕ್ಷತ್ರಗಳ ನಿಷೇಧವಿಲ್ಲ.

ಕಾರ್ಷ್ಣಾಜಿನಿಗಳ ಪ್ರಕಾರ ಚತುರ್ದಶಿಯಂದೂ ಪಕ್ಷ ಮಾಡಬೇಕು. ಆದರೆ,

**ಮರಣತಿಥಿಯಂದು ಶ್ರಾದ್ಧ ಮಾಡುವವರಿಗೆ ಈ ನಿಯಮವಿಲ್ಲ**

ತಂದೆಯವರ ಮರಣತಿಥಿಯಂದು ಮಾಡುವ ಪಕ್ಷ ಸರ್ವಶ್ರೇಷ್ಠ ಎಂದು ಮುಂದೆ ತಿಳಿಯುತ್ತೇವೆ. ಹೀಗಾಗಿ ಮರಣತಿಥಿಯಂದು ಶ್ರಾದ್ಧ ಮಾಡುವಾಗ ತಿಥಿ ವಾರ ನಕ್ಷತ್ರಗಳ ದೋಷವಿಲ್ಲ.

ಅಂದರೆ ತಂದೆಯವರು ಪ್ರತಿಪದಾ, ಷಷ್ಠೀಗಳಂದೇ ಮರಣ ಹೊಂದಿದ್ದಲ್ಲಿ ಆ ದಿವಸ ಅವಶ್ಯವಾಗಿ ಪಕ್ಷ ಮಾಡಬೇಕು.

ತಂದೆಯವರ ಮರಣ ತಿಥಿ, ಶುಕ್ರವಾರದಂದೇ ಬಂದರೂ, ಆ ದಿವಸ ಕರ್ತೃವಿನ ಜನ್ಮನಕ್ಷತ್ರವಿದ್ದರೂ ಅವಶ್ಯವಾಗಿ ಶ್ರಾದ್ಧವನ್ನು ಮಾಡಬೇಕು.

**ಆದರೆ ತಂದೆಯವರು ಏಕಾದಶಿ ಮತ್ತು ಚತುರ್ದಶಿಗಳಂದು ಮರಣ ಹೊಂದಿದ್ದರೆ ಬೇರೆಯ ದಿವಸ ಶ್ರಾದ್ಧವನ್ನು ಮಾಡಬೇಕು. ಏಕಾದಶಿಯ ನಿಯಮ ಶ್ರಾದ್ಧ ನಿಯಮಕ್ಕಿಂತಲೂ ಮಿಗಿಲು ಮತ್ತು ಚತುರ್ದಶಿ ಕೇವಲ ದುರ್ಮರಣ ಹೊಂದಿದವರಿಗೆ ಮಾತ್ರ.**

ತಂದೆಯವರು ಹುಣ್ಣಿಮೆಯಂದು ಮರಣ ಹೊಂದಿದ್ದರೆ ಅಮಾವಾಸ್ಯೆ ಶ್ರಾದ್ಧವನ್ನು ಮಾಡಬೇಕು.

**ಅಮಾವಾಸ್ಯಾ, ವ್ಯತೀಪಾತ ಭರಣೀ, ದ್ವಾದಶೀ, ಅಷ್ಟಮೀಗಳಿಗೆ ಈ ನಿಯಮವಿಲ್ಲ**

ಅಮಾವಾಸ್ಯಾ, ಭರಣೀ, ಅಷ್ಟಮೀ, ವ್ಯತೀಪಾತಗಳು ಒಂದು ಬಾರಿ ಪಕ್ಷ

ಮಾಡುವವರಿಗೆ ಶ್ರೇಷ್ಠವಾದ ದಿವಸಗಳು ಎಂದು ಋಷಿಗಳು ತಿಳಿಸುತ್ತಾರೆ. **ಆ ದಿವಸಗಳಿಗೆ, ಹಾಗೂ ಯತಿದ್ವಾದಶಿಗೆ ತಿಥಿ, ವಾರ, ನಕ್ಷತ್ರಗಳ ನಿಷೇಧ ಅನ್ವಯಿಸುವದಿಲ್ಲ.**

**ಅಮಾ ಪಾತೇ ಭರಣ್ಯಾಂ ಚ**
**ದ್ವಾದಶ್ಯಾಂ ಪಕ್ಷಮಧ್ಯಕೇ**
**ತಥಾ ತಿಥಿಂ ಚ ನಕ್ಷತ್ರಂ**
**ವಾರಂ ಚ ನ ವಿಚಾರಯೇತ್**

ಅಮಾವಾಸ್ಯೆ, ದ್ವಾದಶೀ ಮತ್ತು ಮಧ್ಯಾಷ್ಟಮಿಗಳಂದು ಪಕ್ಷ ಮಾಡುವವರಿಗೆ, ವ್ಯತೀಪಾತ, ಭರಣೀನಕ್ಷತ್ರಗಳು ಇರುವ ದಿವಸ ಶ್ರಾದ್ಧ ಮಾಡುವವರಿಗೆ, ನಿಷಿದ್ಧ ತಿಥಿ ವಾರ ನಕ್ಷತ್ರಗಳ ನಿಯಮ ಅನ್ವಯಿಸುವದಿಲ್ಲ.

ಅಂದರೆ ಈ ದಿವಸಗಳಲ್ಲಿ ನಿಷಿದ್ಧವಾದ ತಿಥಿ, ವಾರ, ನಕ್ಷತ್ರವಿದ್ದರೂ ಅವಶ್ಯವಾಗಿ ಪಕ್ಷ ಮಾಡಬಹುದು.

## ಮಹಾಲಯಕ್ಕೆ ಶ್ರೇಷ್ಠವಾದ ದಿವಸಗಳು

ಸಮಗ್ರ ಪಕ್ಷದಲ್ಲಿ ಶ್ರಾದ್ಧದ ಆಚರಣೆಯನ್ನು ಮಾಡಲು ಸಾಧ್ಯವಿಲ್ಲದ ಪಕ್ಷದಲ್ಲಿ ಒಂದು ದಿವಸವಂತೂ ಅವಶ್ಯವಾಗಿ ಮಾಡಲೇಬೇಕು. ಆಗ ಯಾವ ದಿವಸಗಳಲ್ಲಿ ಶ್ರಾದ್ಧ ಮಾಡುವದು ಉತ್ತಮ ಪಕ್ಷ ಎನ್ನುವದನ್ನೂ ಸಹ ಶಾಸ್ತ್ರ ಪರಿಸ್ಪಷ್ಟವಾಗಿ ತಿಳಿಸುತ್ತದೆ.

## ತಂದೆಯವರ ಮರಣತಿಥಿ ಪಕ್ಷಕ್ಕೆ ಸರ್ವಶ್ರೇಷ್ಠ

ಕಾತ್ಯಾಯನರು ತಿಳಿಸುತ್ತಾರೆ —

**ಯಾ ತಿಥಿರ್ಯಸ್ಯ ಮಾಸಸ್ಯ**
**ಮೃತಾಹೇ ತು ಪ್ರವರ್ತತೇ ।**
**ಸಾ ತಿಥಿಃ ಪಿತೃಪಕ್ಷೇ ತು**
**ಪೂಜನೀಯಾ ಪ್ರಯತ್ನತಃ ॥**

ತಂದೆಯವರು ಯಾವ ತಿಥಿಯಂದು ಮರಣ ಹೊಂದಿದ್ದಾರೆಯೋ ಪಿತೃಪಕ್ಷದಲ್ಲಿ ಪ್ರಯತ್ನ ಪಟ್ಟು ಆ ತಿಥಿಯಂದೇ ಶ್ರಾದ್ಧವನ್ನು ಮಾಡಬೇಕು.

ನಮ್ಮ ತಂದೆಯವರು ಪ್ರತಿಪದಾ ದಿವಸ ಮರಣ ಹೊಂದಿದ್ದಲ್ಲಿ, ಪ್ರತಿಪದಾ ದಿವಸವೇ ಪ್ರಯತ್ನ ಪಟ್ಟು ಶ್ರಾದ್ಧ ಮಾಡಬೇಕು. ತಂದೆ ಷಷ್ಠೀ ತಿಥಿಯಂದು ಮರಣ ಹೊಂದಿದ್ದರೆ ಷಷ್ಠಿಯಂದೇ ಪಕ್ಷವನ್ನು ಮಾಡಬೇಕು. ಆದರೆ, ಏಕಾದಶೀ ಮತ್ತು ಚತುರ್ದಶಿಯಂದು ಮಾತ್ರ ಪಕ್ಷ ಮಾಡುವ ಹಾಗಿಲ್ಲ ಎನ್ನುವದನ್ನು ಹಿಂದೆಯೇ ತಿಳಿದಿದ್ದೇವೆ.

ಪ್ರತಿಪದಾ, ಷಷ್ಠೀ, ಜನ್ಮನಕ್ಷತ್ರಗಳು ಪಕ್ಷಕ್ಕೆ ನಿಷಿದ್ಧವಾದವು. ಆ ದಿವಸಗಳಲ್ಲಿ ತಂದೆಯವರ ಮರಣತಿಥಿ ಬಂದಲ್ಲಿ ಪಕ್ಷ ಮಾಡಬಹುದೇ ಎಂದರೆ ಅವಶ್ಯವಾಗಿ ಮಾಡಲೇಬೇಕು ಎಂದು ಕಾತ್ಯಾಯನರು ಉತ್ತರ ನೀಡಿದ್ದಾರೆ —

**ಅಶಕ್ತಃ ಪಿತೃಪಕ್ಷೇ ತು**
**ಕರೋತ್ಯೇಕದಿನೇ ಯದಾ**[4]
**ನಿಷಿದ್ಧೇಽಪಿ ದಿನೇ ಕುರ್ಯಾತ್**
**ಪಿಂಡದಾನಂ ಯಥಾವಿಧಿ**

[4] ಇದು ಮರಣತಿಥಿಯ ದಿವಸ ಶ್ರಾದ್ಧ ಮಾಡುವ ಪ್ರಕರಣದಲ್ಲಿರುವ ವಾಕ್ಯ. ಹೀಗಾಗಿ, ಎಲ್ಲ ಸಕೃನ್ಮಹಾಲಗಳಿಗೂ ಅನ್ವಯಿಸುವದಿಲ್ಲ.

ಇಡಿಯ ಹದಿನೈದು ದಿವಸಗಳಲ್ಲಿ ಶ್ರಾದ್ಧ ಮಾಡಲಿಕ್ಕಾಗದೇ, ಒಂದೇ ದಿವಸ ಶ್ರಾದ್ಧ ಮಾಡುವವರು, ತಂದೆಯ ಮೃತತಿಥಿಯ ದಿವಸ ಮಾಡಬೇಕು. ತಂದೆಯವರ ಮೃತತಿಥಿ ನಿಷಿದ್ಧವಾದ ದಿವಸಗಳಲ್ಲಿದ್ದರೂ ಆ ದಿವಸವೇ ಪಕ್ಷ ಮಾಡಬೇಕು.

ಏಕಾದಶೀ ಅಥವಾ ಚತುರ್ದಶಿಯಂದು ಮರಣ ಹೊಂದಿದ್ದಲ್ಲಿ ಅಮಾವಾಸ್ಯಾ, ಭರಣೀ ಮುಂತಾದ ದಿವಸಗಳಲ್ಲಿ ಮಹಾಲಯಶ್ರಾದ್ಧ ಮಾಡಬೇಕು. ಕಾರಣ ಏಕಾದಶಿಯ ನಿಯಮ ಸಕಲ ನಿಯಮಗಳಿಗಿಂತಲೂ ಶ್ರೇಷ್ಠವಾದದ್ದು.

ಮರೀಚಿಋಷಿಗಳು **"ಶ್ರಾದ್ಧಂ ಶಸ್ತ್ರಹತಸ್ಯೈವ ಚತುರ್ದಶ್ಯಾಂ ಮಹಾಲಯೇ"** ಎಂದು ಹೇಳಿರುವದರಿಂದ ಚತುರ್ದಶಿ ಕೇವಲ ದುರ್ಮರಣ ಹೊಂದಿರುವವರಿಗೆ.

ತಂದೆಯವರೇ ವಿಷ-ಸರ್ಪ-ಶಸ್ತ್ರ-ಅಪಘಾತ ಮುಂತಾದವುಗಳಿಂದ ದುರ್ಮರಣ ಹೊಂದಿದ್ದಲ್ಲಿ ಅವರ ಏಕೋದ್ದಿಷ್ಟ ಶ್ರಾದ್ಧವನ್ನು ಮಾತ್ರ

ಚತುರ್ದಶಿಯಂದು ಮಾಡಿ ಪಕ್ಷವನ್ನು ಅಮಾವಾಸ್ಯೆ ಮುಂತಾದ ದಿವಸಗಳಲ್ಲಿ ಮಾಡಬೇಕು.

**ಸಮತ್ವಮಾಗತಸ್ಯಾಪಿ**
**ಪಿತುಃ ಶಸ್ತ್ರಹತಸ್ಯ ವೈ**
**ಏಕೋದ್ದಿಷ್ಟಂ ಸುತೈಃ ಕಾರ್ಯಂ**
**ಚತುರ್ದಶ್ಯಾಂ ಮಹಾಲಯೇ**

ತಂದೆಯವರು ದುರ್ಮರಣ ಹೊಂದಿದ್ದಲ್ಲಿ, ಅವರ ಪಕ್ಷವನ್ನು ಬೇರೊಂದು ದಿನ ಮಾಡಿ ಸುಮ್ಮನಾಗುವಂತಿಲ್ಲ. ಪಕ್ಷವನ್ನು ಶುದ್ಧವಾದ ದಿವಸ ಮಾಡಲೇಬೇಕು. ಘಾತಚತುರ್ದಶಿಯಂದು ಏಕೋದ್ದಿಷ್ಟವನ್ನೂ[5] ಮಾಡಬೇಕು.

ತಂದೆಯವರು ಚತುರ್ದಶೀ ಅಥವಾ ಹುಣ್ಣಿಮೆಯಂದು ಮರಣ ಹೊಂದಿದ್ದಲ್ಲಿ ಅಮಾವಾಸ್ಯೆಯಂದು ಪಕ್ಷ ಮಾಡಬೇಕು.

---

[5] ಏಕೋದ್ದಿಷ್ಟ ಎಂದರೆ ಒಂದೇ ಪಿಂಡವನ್ನಿಟ್ಟು ಮಾಡುವ ಶ್ರಾದ್ಧ.

## ಅಮಾವಾಸ್ಯಾ

ಅಶೌಚ ಮುಂತಾದ ಕಾರಣಗಳಿಂದ ತಂದೆಯವರ ಮೃತತಿಥಿಯಂದು ಮಹಾಲಯಶ್ರಾದ್ಧ ಮಾಡಲು ಸಾಧ್ಯವಾಗದಿದ್ದಲ್ಲಿ ಅಮಾವಾಸ್ಯೆಯ ದಿವಸ ಮಹಾಲಯಶ್ರಾದ್ಧವನ್ನು ಮಾಡಬೇಕು.

ಪಿತೃಗಳಿಗೆ ದಕ್ಷಿಣಾಯನ ಅತ್ಯಂತ ಪ್ರಿಯವಾದದ್ದು. ಅದರಲ್ಲಿಯೂ ಚಾತುರ್ಮಾಸ್ಯ ಅತ್ಯಂತ ಪ್ರಿಯ. ಅದರಲ್ಲಿಯೂ ಭಾದ್ರಪದ ಮಾಸ. ಅದರಲ್ಲಿಯೂ ಕೃಷ್ಣಪಕ್ಷ. ಅದರಲ್ಲಿಯೂ ಅಮಾವಾಸ್ಯೆ. ಆದ್ದರಿಂದ ಅಮಾವಾಸ್ಯೆಯಂದು ಶ್ರಾದ್ಧವನ್ನು ಮಾಡಬೇಕು.

## ಮಹಾಭರಣೀ

ಪಿತೃಪಕ್ಷದಲ್ಲಿ ಭರಣೀನಕ್ಷತ್ರ ಇರುವ ದಿವಸ ಮಾಡುವ ಶ್ರಾದ್ಧ ಗಯಾಶ್ರಾದ್ಧಕ್ಕೆ ಸಮ ಎಂದು ಮತ್ಸ್ಯಪುರಾಣ ತಿಳಿಸುತ್ತದೆ —

**ಭರಣೀ ಪಿತೃಪಕ್ಷೇ ತು**
**ಮಹತೀ ಪರಿಕೀರ್ತಿತಾ**

## ಅಸ್ಯಾಂ ಶ್ರಾದ್ಧಂ ಕೃತಂ ಯೇನ
## ಸ ಗಯಾಶ್ರಾದ್ಧಕೃದ್ ಭವೇತ್

ಪಿತೃಪಕ್ಷದಲ್ಲಿ ಭರಣೀ ನಕ್ಷತ್ರ ಇರುವ ದಿವಸ ಅತ್ಯಂತ ಮಹತ್ವದ್ದೆಂದು ಋಷಿಗಳಿಂದ ಹೊಗಳಲ್ಪಟ್ಟಿದೆ. ಯಾರು ಭರಣೀನಕ್ಷತ್ರವಿರುವ ದಿವಸ ಶ್ರಾದ್ಧ ಮಾಡುತ್ತಾರೆಯೋ ಅವರು ಗಯಾಶ್ರಾದ್ಧದ ಫಲವನ್ನು ಪಡೆಯುತ್ತಾರೆ.

ಭರಣೀ ನಕ್ಷತ್ರ ಮಧ್ಯಾಹ್ನಕಾಲದಲ್ಲಿ ಇರುವ ದಿವಸ ಶ್ರಾದ್ಧ ಮಾಡಬೇಕು.

## ಮಧ್ಯಾಷ್ಟಮೀ

ಪಕ್ಷದಲ್ಲಿ ಹದಿನೈದು ದಿವಸಗಳು. ಅಷ್ಟಮೀ ಅದರ ಮಧ್ಯದಲ್ಲಿ ಬರುವದರಿಂದ ಇದನ್ನು ಮಧ್ಯಾಷ್ಟಮೀ ಎಂದು ಕರೆಯುತ್ತಾರೆ.

ಮರಣತಿಥಿ, ಅಮಾವಾಸ್ಯಾ, ಮಹಾಭರಣೀ-ಗಳಂದು ಶ್ರಾದ್ಧ ಮಾಡಲು ಸಾಧ್ಯವಿಲ್ಲದಿದ್ದಲ್ಲಿ ಮಧ್ಯಾಷ್ಟಮಿಯಂದು ಶ್ರಾದ್ಧ ಮಾಡಬಹುದು.

ಅಮಾವಾಸ್ಯಾ, ಭರಣೀ, ಮಧ್ಯಾಷ್ಟಮೀ, ಯತಿದ್ವಾದಶೀಗಳಿಗೆ ತಿಥಿವಾರ ನಕ್ಷತ್ರಗಳ ನಿಷೇಧವಿಲ್ಲ ಎನ್ನುವದನ್ನು ಹಿಂದೆಯೇ ತಿಳಿಸಿದ್ದೇನೆ.

**ಯಾರಿಗೆ, ಮೃತತಿಥಿ, ಅಮಾವಾಸ್ಯಾ, ಭರಣೀ, ಮಧ್ಯಾಷ್ಟಮಿಗಳಂದೂ ಪಕ್ಷ ಮಾಡಲು ಸಾಧ್ಯವಿಲ್ಲ ಅಂತಹವರು, ಅವಿಧವಾನವಮೀ ಮತ್ತು ಯತಿದ್ವಾದಶಿಗಳಂದು ಮಾಡಲು ಸಾಧ್ಯವಿಲ್ಲ. ಪ್ರತಿಪದಾ, ಷಷ್ಠೀ, ಏಕಾದಶೀ, ಚತುರ್ದಶೀ ತಿಥಿಗಳಂದು ಪಕ್ಷ ಮಾಡಬಾರದು. ಶುಕ್ರವಾರದಂದು ಪಕ್ಷ ಮಾಡಬಾರದು. ಮತ್ತು ಕರ್ತೃವಿನ ಜನ್ಮನಕ್ಷತ್ರದಂದು ಪಕ್ಷ ಮಾಡಬಾರದು. ಹೀಗಾಗಿ ಬೇರೆಯ ದಿವಸ ಶ್ರಾದ್ಧ ಮಾಡಬೇಕು.**

ಈ ನಿಷಿದ್ಧದಿವಸಗಳಲ್ಲಿ ಪಕ್ಷ ಮಾಡುವದರಿಂದ ಸಂತಾನಹಾನಿ ಮತ್ತು ಧನಹಾನಿಯಾಗುತ್ತದೆ ಎಂದು ವಸಿಷ್ಠಮಹರ್ಷಿಗಳು ನೀಡಿರುವ ಎಚ್ಚರವನ್ನು ಮರೆಯಬಾರದು.

— ವಿಷ್ಣುದಾಸ ನಾಗೇಂದ್ರಾಚಾರ್ಯ

# <u>ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ</u>

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ  ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು
ವರ್ಗಾಯಿಸುವಾಗ**

**“ವಿಶ್ವನಂದಿನಿ ಗಮ್ಯ ತಲುಪಲಿ”**

**ಎಂದು ಗುರುದೇವತೆಗಳಗೆ,
ಶ್ರೀ ವೇದವ್ಯಾಸದೇವರಿಗೆ
ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ


**Vishnudasa Nagendracharya**

No. 2, “Sri Madhwanuja Mandiram"
Kaveri Marga,  Hemmige Village,
Talakadu,  T Narasipura,
Mysore - 571122, Karnataka, India

nagendracharya@yahoo.co.in

WhatsApp:  9901 551 491